# ‘ಸಿಕ್ಕ ಅವಕಾಶವನ್ನು ಶ್ರದ್ಧೆಯಿಂದ ನಿರ್ವಹಿಸುವೆ’

**ಕಿರುತೆರೆ ನಿರೂಪಕಿಯಾಗಿ ಜನಪ್ರಿಯರಾಗಿರುವ ಅನುಶ್ರೀ, ‘ಸೈತಾನ್’ ಸಿನಿಮಾ ಮೂಲಕ ಮತ್ತೆ ಹಿರಿತೆರೆಗೆ ಮರಳುತ್ತಿದ್ದಾರೆ. ಟೀವಿ, ಸಿನಿಮಾ, ವೆಬ್‌ಸೀರೀಸ್ –ಹೀಗೆ ಒಳ್ಳೆಯ ಅವಕಾಶ ಎಲ್ಲಿಯೇ ಸಿಕ್ಕರೂ ಒಪ್ಪಿಕೊಳ್ಳುತ್ತೇನೆ ಎನ್ನುವುದು ಅವರ ಅಂಬೋಣ.**

■ **ಪದ್ಮನಾಭ ಭಟ್**



ಅನುಶ್ರೀ ಮತ್ತೆ ಬಿಗ್‌ಸ್ಕ್ರೀನ್‌ಗೆ ವಾಪಸ್ಸಾಗಿದ್ದಾರೆ! 2017ರಲ್ಲಿ ತೆರೆಕಂಡ ‘ಉಪ್ಪು ಹುಳಿ ಖಾರ’ ಅನುಶ್ರೀ ನಟಿಸಿದ ಕೊನೆಯ ಸಿನಿಮಾ. ಅದರ ನಂತರ ಅವರು ಕಿರುತೆರೆ ರಿಯಾಲಿಟಿ ಶೋ ನಿರೂಪಣೆಯಲ್ಲಿ ಮುಳುಗಿದ್ದರು. ಐದು ವರ್ಷಗಳ ನಂತರ ಮತ್ತೆ ಹಿರಿತೆರೆಯಲ್ಲಿ ‘ಸೈತಾನ್’ ಎಂಬ ಹಾರರ್ ಸಿನಿಮಾಗೆ ಬಣ್ಣಹಚ್ಚುವ ಉತ್ಸಾಹದಲ್ಲಿ ಅವರಿದ್ದಾರೆ.

ಅವರು ನಾಯಕಿಯಾಗಿ ನಟಿಸಿದ ‘ಬೆಂಕಿಪಟ್ಣ’ ಮತ್ತು ‘ಉಪ್ಪು ಹುಳಿ ಖಾರ’ ಸಿನಿಮಾಗಳು ಗಲ್ಲಾಪೆಟ್ಟಿಗೆಯಲ್ಲೇನೂ ಗೆಲುವು ಸಾಧಿಸಿರಲಿಲ್ಲ. ಎರಡೂ ಸಿನಿಮಾಗಳಲ್ಲಿ ಅವರ ನಟನೆಗೆ ಪ್ರಶಂಸೆ ವ್ಯಕ್ತವಾಗಿದ್ದರೂ ಅವಕಾಶಗಳೇನೂ ಸಾಲುಗಟ್ಟಿರಲಿಲ್ಲ. ಹಾಗಾಗಿ ತುಸು ನಿರಾಸೆಯಿಂದಲೇ ಅವರು ಚಿತ್ರರಂಗದಿಂದ ಹೆಜ್ಜೆ ಹಿಂದಕ್ಕಿಟ್ಟು ಕಿರುತೆರೆಯತ್ತ ಹೊರಳಿದ್ದರು.

‘ನಿಜ ಹೇಳಬೇಕು ಅಂದರೆ ಈಗಲೂ ನನಗೆ ಸಿನಿಮಾ ಮಾಡುವ ಆಸೆ ಇರಲಿಲ್ಲ. ಅಲ್ಲಿ ನಾನು ಮಾಡಿದ ಯಾವ ಪ್ರಯತ್ನವೂ ಫಲ ನೀಡಲಿಲ್ಲ ಎಂಬ ಬೇಜಾರಿತ್ತು. ಅದನ್ನು ಹೇಗೋ ದಾಟಿ ಬಂದೆ. ಅದಕ್ಕಿಂತ ಹೆಚ್ಚಾಗಿ ನಂತರದ ದಿನಗಳಲ್ಲಿ ನಾನು ತೊಡಗಿಕೊಂಡ ಕಿರುತೆರೆ ಕಾರ್ಯಕ್ರಮಗಳಲ್ಲಿ ಒಳ್ಳೆಯ ಹೆಸರು ಸಿಕ್ಕಿತು. ಆ ಖುಷಿಯಲ್ಲಿಯೇ ನಾನು ಈಗಲೂ ಇದ್ದೇನೆ. ನಾನು ಕಲಾವಿದೆ. ನಾನು ಜನರ ಮನಸಲ್ಲಿ ಗುರ್ತಿಸಿಕೊಳ್ಳಬೇಕು. ಹಿರಿತೆರೆಯಾಗಲಿ, ಕಿರುತೆರೆಯಾಗಲಿ, ಜನರ ಪ್ರೀತಿ ತುಂಬ ಮುಖ್ಯ. ಅದು ನನಗೆ ಕಿರುತೆರೆಯಲ್ಲಿ ಸಿಗುತ್ತಿದೆ. ಹಾಗಾಗಿ ಖುಷಿಯಾಗಿ ಇದರಲ್ಲಿ ತೊಡಗಿಕೊಂಡಿದ್ದೆ’ ಎನ್ನುವ ಅನುಶ್ರೀ ತಮಗಾಗಿ ಒಂದು ಸಿನಿಮಾ ಪಾತ್ರ ಕಾಯುತ್ತಿದೆ ಎಂದು ಗೊತ್ತಾದ ಮೇಲೂ ಸುಲಭವಾಗಿಯೇನೂ ನಟಿಸಲು ಒಪ್ಪಿಕೊಂಡಿರಲಿಲ್ಲ.

ಒಂದು ಇವೆಂಟ್‌ನಲ್ಲಿ ಭೇಟಿಯಾದ ನಿರ್ದೇಶಕ ಇಮ್ರಾನ್ ಸರ್ದಾರಿಯಾ ಅವರು ‘ಲೋಹಿತ್ ಅವರು ನಿಮಗೆ ಒಂದು ಕಥೆ ಹೇಳ್ಬೇಕಂತೆ. ಅವರ ಒಂದು ಸಿನಿಮಾದಲ್ಲಿ ನಿಮಗೆ ಪಾತ್ರ ಕೊಡಬೇಕು ಅಂತ ಅಂದುಕೊಂಡಿದ್ದಾರೆ’ ಎಂದು ಹೇಳಿದಾಗ ಅನುಶ್ರೀ ಅಡ್ಡಡ್ಡ ತಲೆಯಾಡಿಸಿದ್ದರು. ‘ನಾನು ಕಿರುತೆರೆಯಲ್ಲಿಯೇ ಖುಷಿಯಾಗಿದ್ದೀನಿ. ಸಿನಿಮಾ